Sri G. SIVAPPA.—Is it not a fact that concession was given from the end of March but the order was passed in June.

Sri M. P. PATIL.—I have no dates here. If the Hon'ble Member requires, I will enquire.

ಶ್ರೀ ಜಿ. ಶಿವಪ್ಪ.—ತಾವು ಮಾರ್ಚಿಯ ಕೊನೆಯಲ್ಲಿ ಮುಗಿದು ಹೋದ ರಿಯಾಯಿತಿಯನ್ನು ಮುಂದುವರಿಸುವ ಸರ್ಕಾರಿ ಆಜ್ಞೆಯನ್ನು ಜೂನ್‌ನಲ್ಲಿ ಮಾಡಿದುದರಿಂದ ಮಧ್ಯೆ ಎರಡು ತಿಂಗಳು ಸಂಘಗಳಲ್ಲಿ ತೊಂದರೆ ಯಾಗಿರುವುದು ಗೊತ್ತಿದೆಯೇ ?

ಅಧ್ಯಕ್ಷರು.—ಶ್ರೀ ದುಗ್ಗಪ್ಪನವರು ಕೇಳಿದ ಪ್ರಶ್ನೆಗೆ ಉತ್ತರ ಹೇಳಿದ್ದಾರೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಮಧ್ಯೆ ಎರಡು ತಿಂಗಳ ಅವಧಿಯಲ್ಲಿ ಜನರಿಂದ ಸ್ಟ್ಯಾಂಪ್ ಡ್ಯೂಟಿ ರಿಜಿಸ್ಟ್ರೇಷನ್ ಚಾರ್ಜು ಮುಂತಾದುವುಗಳನ್ನು ತೆಗೆದುಕೊಂಡು ಅವರಿಗೆ ತೊಂದರೆಯಾಗಿದ್ದರೆ ಆ ಹಣವನ್ನು ವಾಪಸು ಮಾಡುತ್ತೀರಾ ?

Sri M. P. PATIL.—I have stated that I will make enquiries. If such cases are brought to my notice I will consider.

Anicut across the Bhima River, Malavalli Taluk.

Q.—528. Sri H. V. VEEREGOWDA (Malavalli).—

Will the Government be pleased to state :—

(*a*) whether they are aware that plans and estimates for the construction of an anicut across the Bhima river near Kodihalli village, Halagur Hobli, Malavalli Taluk, were prepared long back ;

(*b*) whether it is a fact that even the *muchalika* has been executed by the ryots of that area ;

(*c*) why the work has not been started as yet ;

(*d*) whether they would complete the above work early ?

A.—Sri H. K. VEERANNA GOWDH (Minister for Public Works).—

(*a*) Yes, for a tank.

(*b*) No.

(*c*) It was ordered that the work be deferred.

(*d*) The question of taking up the work will be considered after the estimate, which is being recast, is ready and comes up for sanction.

ಶ್ರೀ ಎಚ್. ವಿ. ವೀರೇಗೌಡ.—ಈ ಅಣೆಕಟ್ಟಿನ ಅಂದಾಜೆಷ್ಟಾಗಿದೆ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಅದರ ಅಂದಾಜು ಹಾಗೆ ತಿಳಿಸಲು ಸಾಧ್ಯವಿಲ್ಲ. ಕಾರಣ ಮೂರಾವರ್ತಿ ಅಂದಾಜುಗಳನ್ನು ಮಾಡಲಾಯಿತು. ಮೊದಲನೆ ಅಂದಾಜನ್ನು 1948ರಲ್ಲಿ 4ಲಕ್ಷ 17 ಸಾವಿರದ 125ರೂ. ಗಳಿಗೂ ಪುನಃ 1952ರಲ್ಲಿ ಆದ ಅಂದಾಜು 7 ಲಕ್ಷ 60 ಸಾವಿರವೆಂದೂ ಮತ್ತು ಈಗ ಹಾಲಿ ನಮ್ಮ ಮುಂದಿರ ತಕ್ಕ ಅಂದಾಜು ಪ್ರಕಾರ 8 ಲಕ್ಷ ರೂಪಾಯಿಗಳೆಂದೂ ತಿಳಿದುಬಂದಿದೆ. ನಿಮಗೆ ಈ ಪೈಕಿ ಯಾವುದು ಬೇಕೋ ನೋಡಿಕೊಳ್ಳಿ.

*ಶ್ರೀ ಎಚ್. ವಿ. ವೀರೇಗೌಡ.—ಅಲ್ಲಿರತಕ್ಕರೈತರು ಎಕರೆಯೊಂದಕ್ಕೆ 500ರೂಪಾಯಿಗಳ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಮುಚ್ಚಳಿಕೆ ಬರೆದು ಕೊಟ್ಟಿದ್ದಾರೆಂಬ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ರೀತಿ ಮುಚ್ಚಳಿಕೆ ಬರೆಸಿಕೊಳ್ಳುವ ಮಾಟ್ಟಕ್ಕೆ ಇನ್ನೂ ಬಂದಿಲ್ಲ. ಆದರೆ ಕೆಲವು ರೈತರು 450ರೂಪಾಯಿಗಳವರೆಗೂ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಅರ್ಜಿ ಬರೆದು ಕೊಂಡಿದ್ದಾರೆ.

ಶ್ರೀ ಎಚ್. ವಿ. ವೀರೇಗೌಡ.—ಕೆಲವರು 750 ರೂಪಾಯಿಗಳವರೆಗೂ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಅರ್ಜಿ ಕೊಟ್ಟಿರುವುದು ನಿಜವಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹಾಗೂ ಕೆಲವು ಅರ್ಜಿಗಳು ಬಂದಿವೆ.

ಶ್ರೀ ಎಚ್. ವಿ. ವೀರೇಗೌಡ.—ಎಚ್ಚರಿಕೆ ಜಾಗ್ರತೆ ಈ ಕೆಲಸವನ್ನು ಕೈಗೊಳ್ಳಲು ಏರ್ಪಾಡು ಮಾಡುವಿರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ರೈತರು ಹಾಗೆ ಹೆಚ್ಚಾಗಿ ಕಾಂಟ್ರಿಬ್ಯೂಷನ್ ಕೊಡುತ್ತಾರೆಂಬ ಮಾತ್ರಕ್ಕೆ ಈ ಕೆಲಸವನ್ನು ಕೈಗೊಳ್ಳುವುದಕ್ಕಾಗುವುದಿಲ್ಲ. ಆದರೆ ಈ ಪ್ರಾಜೆಕ್ಟನ್ನು ಅಲ್ಲಿ ಕಟ್ಟಲು ಇರತಕ್ಕ ಸಾಧ್ಯಾಸಾಧ್ಯತೆಗಳನ್ನೂ ಮತ್ತು ಇವರ ಉಪಯೋಗ ಎಷ್ಟಾಗುತ್ತದೆಂಬುದನ್ನೂ ನೋಡಿ ಒಂದು ತೀರ್ಮಾನಕ್ಕೆ ಬರಬೇಕಾಗಿದೆ.

ಶ್ರೀ ಎಂ. ಲಿಂಗೇಗೌಡ.—ತಾವೀಗ ಈ ಕೋಡೀ ಹಳ್ಳಿ ಹತ್ತಿರ ಕಟ್ಟಿಸಬೇಕೆಂದು ಅಂದಾಜು ಮಾಡುತ್ತಿರುವ ಪ್ರಾಜೆಕ್ಟ್‌ನ್ನು 'ಹೊಣವಿನಹಳ್ಳಿ ಪ್ರಾಜೆಕ್ಟ್' ಎಂದು ಕರೆಯುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದುವರೆಗೂ ನಾವೇನೂ ಆ ರೀತಿ ಇದನ್ನು ಕರೆದಿರುವುದಿಲ್ಲ.

ಶ್ರೀ ಎಂ. ಲಿಂಗೇಗೌಡ.—1948ರಲ್ಲಿ ಮೊದಲು ಅಂದಾಜಾಗುವಾಗ್ಗೆ ಅದಕ್ಕೆ 20 ವರ್ಷಗಳ ಹಿಂದಿನಿಂದಲೂ ಹೀಗೇ ಈ ಕೆಲಸ ಬರಿ ಅಂದಾಜಾಗುವುದರಲ್ಲೇ ಪರ್ಯವಸಾನವಾಗಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹೌದು.

ಶ್ರೀ ಎಂ. ಲಿಂಗೇಗೌಡ.—ಈ ಹಿಂದೆಯೇ ಇದರ ಬಗ್ಗೆ ಒಂದು ತೀರ್ಮಾನ ಕೈಗೊಂಡಿರಲಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಈ ಹಿಂದೆ ಸ್ಥಳ ಪರೀಕ್ಷೆ ನಡೆಸಿದಾಗ ಚೀಫ್ ಇಂಜಿನಿಯರ್ ಅವರು ಈ ಪ್ರಾಜೆಕ್ಟ್‌ನ್ನು ಕೋಡಿಹಳ್ಳಿ ಹತ್ತಿರ ಕಟ್ಟಿದರೆ ಬಹಳ ಲಾಭದಾಯಕವಾಗಿರುತ್ತದೆಂದು ತಿಳಿಸಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ರೀತಿ ಅವರು ಎಲ್ಲಿಯೂ ತಮ್ಮ ಅಭಿಪ್ರಾಯ ತಿಳಿಸಿದ್ದಂತೆ ಕಂಡು ಬರಲಿಲ್ಲ. ಈ ಪ್ರಾಜೆಕ್ಟನ್ನು ಎರಡು ಜಾಗದಲ್ಲಿ ಕಟ್ಟಬೇಕೆಂಬ ಅಭಿಪ್ರಾಯವಿದೆ. ಎರಡು ತಾಲ್ಲೂಕಿನ ಜನರು ಒಬ್ಬೊಬ್ಬರು ಒಂದೊಂದು ಕಡೆ ಕಟ್ಟಿಸಿಕೊಡಿ ಎಂದು ಕೇಳುತ್ತಿದ್ದಾರೆ. ಆದರೆ ಈ ಎರಡ್ಕೂ

ತಾಲ್ಲೂಕಿನ ಜನರಿಗೂ ಅನುಕೂಲವಾಗಿರಬೇಕಾಗಿದ್ದರೆ ಎಲ್ಲಿ ಇದನ್ನು ಕಟ್ಟಿಸಿದರೆ ಉತ್ತಮವಾಗಿರುತ್ತದೆಂಬ ಬಗ್ಗೆ ಆಲೋಚನೆಗಳು ನಡೆಯುತ್ತಿವೆ.

Sri H. M. CHANNABASAPPA.—What is the estimated return ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದರ ಅಂದಾಜು ರೆಮುನರೇಟೀವ್ ಆಗಿರುತ್ತದೆಯೆಂಬ ವಿಚಾರವಿನ್ನೂ ನಿರ್ಧಾರವಾಗಿಲ್ಲ. ಈಗಿನ ಅಂದಾಜಿದ ಪ್ರಕಾರ ಇದರ ವೆಚ್ಚ 8 ಲಕ್ಷ ರೂಪಾಯಿಗಳೆಂದು ಹೇಳ ಲಾಗುತ್ತಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈ ಪ್ರಾಜೆಕ್ಟ್ ಅಂದಾಜನ್ನು ಮೂರಾವರ್ತಿ ಬದಲಾವಣೆ ಮಾಡಲು ಇದರ ಡಿಸೈನ್‌ನಲ್ಲಿ ಏನಾದರೂ ವ್ಯತ್ಯಾಸವಾಗಿತ್ತೋ ಅಥವಾ ಮತ್ತೆ ಯಾವ ಕಾರಣದಿಂದ ಹೀಗೆ ಮಾಡ ಲಾಯಿತು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮೊದಲು ಒಂದಾವರ್ತಿ 1948 ರಲ್ಲಿ ಅಂದಾಜು ಆಯಿತು. ಆದರೆ ಆಗ ಸರ್ಕಾರದವರು ಅಷ್ಟೊಂದು ದುಡ್ಡಿಲ್ಲ ಎಂದು ಕೈಬಿಟ್ಟಿದ್ದರು. ಪುನಃ ರೈತರಿಂದ ವಿಪರೀತ ತಗಾದೆಗಳು ಬಂದವು. 1952 ರಲ್ಲಿ ಮತ್ತೆ 7ಲಕ್ಷ 60ಸಾವಿರಕ್ಕೆ ಇನ್ನೊಂದು ಅಂದಾಜನ್ನು ತಯಾರಿಸ ಲಾಯಿತು. ಆಗ ಕೆಲವರು ಈ ಪ್ರಾಜೆಕ್ಟ್‌ನ್ನು ಅ ನ್ಯಳ ದಿಂದ ಬದಲಾಯಿಸಿ ಬೇರೆ ಕಡೆ ಕಟ್ಟಬೇಕೆಂದು ಅರ್ಜಿ ಹಾಕಿದರು. ಆಗ ಅದರ ಪ್ರಕಾರ ಇನ್‌ವೆಸ್ಟಿಗೇಷನ್— ಅದರ ಎಸ್ಟಿಮೇಷನ್ ಇತ್ಯಾದಿಗಳಿಂದ ಕೊಂಚ ಕಾಲ ನಿಧಾನವಾಯಿತು. ಹೀಗೆ ಕಾಲ ತಳ್ಳುತ್ತಾ ಬಂದ ಹಾಗೆಲ್ಲಾ ಪ್ರಾಜೆಕ್ಟಿನ ಅಂದಾಜು ಜಾಸ್ತಿಯಾಗುತ್ತಾ ಬಂತು.

Sri H. M. CHANNABASAPPA.—Shall I take it that the increase in the revised estimate by about 100 per-cent is due purely on account of the change in rate and not on account of the change in design ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹಾಗೊಂದು ಖಚಿತವಾದ ಡಿಸೈನ್ ಇಲ್ಲದಿದ್ದದ್ದರಿಂದ ಇದು ಹೀಗೆಲ್ಲಾ ಆಯಿತೆಂದು ಹೇಳುವುದಕ್ಕಾಗುವುದಿಲ್ಲ.

Sri H. M. CHANNABASAPPA.—Please examine the desirability of taking up the work provided it is remunerative in view of the fact that this is purely a dry area in Malavalli Taluk ?

ಶ್ರೀ ಎಚ್. ಕೆ. ವೀರಣ್ಣಗೌಡ.—ತಾವು ಹೇಳುವ ಹಾಗೆ ಈಗ ಇದರಲ್ಲಿ ರೆಮ್ಯುನರೇಟಿವ್ ವಿಚಾರ ಬರುವುದಿಲ್ಲ. ಎರಡು ಕಡೆಗಳಲ್ಲೂ ಕಟ್ಟಡ ಮಾಡಿಸಿ ಎರಡುಪಕ್ಷಗಳವರಿಗೂ ಸಮಾಧಾನ ಪಡಿಸಿ ಅವರಿಗೆ ಅನುಕೂಲ ಮಾಡಿಕೊಡಲು ಸಾಧ್ಯವಿದೆಯೇ ಎಂಬು ದನ್ನು ಪರಿಶೀಲನೆ ಮಾಡಲಾಗುತ್ತಿದೆ. ಇದರ ಮಧ್ಯೆ ಕೆಲವರು ಈ ಪ್ರಾಜೆಕ್ಟಿನ ನೀರನ್ನು ತರಿ ವ್ಯವಸಾಯ ಕ್ಕೇನೂ ಕೊಡಬೇಡಿ—ಹತ್ತಿ, ಹೊಗೆಸೊಪ್ಪು ಇತ್ಯಾದಿ ಬೆಳೆಗಳಿಗೆ ಮಾತ್ರ ಕೊಡುವ ಹಾಗೆ ಮಾಡಿ ಎಂದು ಕೇಳುತ್ತಿದ್ದಾರೆ. ಈಗ ಈ ಎಲ್ಲಾ ಅಂಶಗಳ ಬಗ್ಗೆ ಪರ್ಯಾಲೋಚನೆ ಮಾಡುತ್ತಿದ್ದೇವೆ.

Sri H. M. CHANNABASAPPA.—Are the Government aware that the public Works Minister, during his tour, held out an assurance that provided it is remunerative, the question would be examined sympathetically ?

Sri H. K. VEERANNA GOWDH.—I have also inspected the spot. I did not hold out any such promise at any rate.

Ministers' Quarters--Cost of Furnishing.

Q.—517. Sri. M. LINGE GOWDA (Kanakapura).—

Will the Government be pleased to state :—

(*a*) the expenditure incurred recently on furnishing the Ministers' Quarters ;

(*b*) the amount allotted for this purpose ;

(*c*) whether there is any difference in the allotment on this item for Ministers and Deputy Ministers (details in respect of each of the Ministers may be given) ?

A.—Sri R. CHENNIGARAMIAH (Minister for Local Self-Government).—[On behalf of SRI S. NIJALINGAPPA (Chief Minister]).—

(*a*) An expenditure of Rs. 336-0-0 has so far been incurred on furnishing the residence of the Chief Minister. No expenditure has been incurred on furnishing the other Ministers' residences.

(*b*) There is no separate allotment for this purpose.

(*c*) Does not arise in view of the answer to clause (*b*).

*ಶ್ರೀ ಎಂ. ಲಿಂಗೇಗೌಡ.—(ಎ) ಪ್ರಶ್ನೆಗೆ ಉತ್ತರ ವಾಗಿ 336 ರೂಪಾಯಿಗಳು ಖರ್ಚಾಗಿದೆ ಎಂದು ತಿಳಿಸಲಾಗಿದೆ. ಈ ಹಣಕ್ಕೆ ಡೀಟೇಲ್ಸ್‌ಗಳೇನು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಫರ್ನಿಷ್ ಮಾಡು ವುದಕ್ಕೆ ಅಷ್ಟು ಖರ್ಚಾಗಿದೆ.

ಶ್ರೀ ಎಂ. ಲಿಂಗೇಗೌಡ.—ಖರ್ಚಾಗಿರುವುದಕ್ಕೆ ವಿವರಗಳೇನು ?

ಶ್ರೀ ಆರ್. ಚೆನ್ನಿಗರಾಮಯ್ಯ.—ನೋಟೀಸ್.

ಶ್ರೀ ಎಂ. ಲಿಂಗೇಗೌಡ.—ಬಾಕಿ ಮಂತ್ರಿಗಳಿ ಗೇನೂ ಖರ್ಚಾಗಿಲ್ಲವೆಂದು ತಿಳಿಸಲಾಗಿದೆ. ಅಂದರೆ ಅವರೆಲ್ಲರೂ ಹಿಂದಿದ್ದ ಹಳೆ ಕುರ್ಚಿ, ಮೇಜು ಇತ್ಯಾದಿಗಳನ್ನೇ ಇಟ್ಟು ಕೊಂಡಿದ್ದಾರೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಹಾಗೆ ಹೇಳಿರು ವುದರ ಅರ್ಥವೇ ಅದು.

ಶ್ರೀ ಎಂ. ಲಿಂಗೇಗೌಡ.—ಈ ಹಿಂದೆ ಇಂಥಿಂಥ ಮಂತ್ರಿಗಳು ತಮ್ಮ ವಾಸದ ಬಂಗ್ಲೆಗಳ ಬಗ್ಗೆ